ಮರೆಯಲ್ಲಿ ಚಂದ್ರನನ್ನು, ಬೆಳದಿಂಗಳ ರಾತ್ರಿಗಳಲ್ಲಿ ಗೋದಾವರಿಯನ್ನು, ಅದರಲ್ಲಿ ತೇಲುವ ಗೂಡುದೋಣಿಗಳನ್ನು ನೋಡುವುದು ಸತ್ಯವತಿಗೆ ತುಂಬ ಇಷ್ಟವಾಗುತ್ತಿತ್ತು.

ಮದುವೆಯಾದ ಹೊಸತರಲ್ಲಿ ವೀರಯ್ಯ ಚೆನ್ನಾಗಿದ್ದರೂ, ಚಟಗಳಿಗೆ ದಾಸನಾಗಿದ್ದ ಅವನಿಂದಾಗಿ ಮನೆ, ಮೈ ಎಲ್ಲಾ ಗುಲ್ಲಾಗಿತ್ತು. ಇದರಿಂದ ಮನೆಯ ಸಂಕಷ್ಟಗಳ ವಾಸ್ತವದ ಅರಿವಾಗುತ್ತ ಹೋಗುತ್ತಿದ್ದಂತೆ ಅವಳ ಆನಂದ ಆವಿಯಾಗಲು ಹೆಚ್ಚುಕಾಲ ಬೇಕಾಗಲಿಲ್ಲ.

ಆ ದಿನ ಸಯಂಕಾಲ ಟಿವಿಎಸ್ ಮೊಪೆಡ್‌ನಲ್ಲಿ ಸುಬ್ಬರಾಯ ಸತ್ಯವತಿಯ ಮನೆ ಮುಂದೆ ಬಂದಿಳಿದ. ಆ ಸುತ್ತಮುತ್ತಲ ಗ್ರಾಮಗಳಿಗೆ ಅವನೇ ಆಪದ್ಬಾಂದವ. ಅಪರ ಧನ್ವಂತರಿ! ಕರೆದ ಕೂಡಲೇ ಎಷ್ಟೇ ರಾತ್ರಿಯಾಗಿದ್ದರೂ ಎದ್ದುಬಿದ್ದು ಓಡಿಬರುತ್ತಿದ್ದ. ಎಷ್ಟುಕೊಟ್ಟರೂ ತೆಗೆದುಕೊಳ್ಳುತ್ತಾನೆ. ಇಷ್ಟೇ ಕೊಡಿ ಅಂತ ಎಂದೂ ಯಾರಬಳಿಯೂ ಡಿಮ್ಯಾಂಡ್ ಮಾಡಿದವನಲ್ಲ.

ಯಾವಾಗಲೋ ಇಪ್ಪತ್ತೈದು ವರ್ಷಗಳ ಹಿಂದೆ ಔಷಧಿಗಳಿದ್ದ ಚಿಕ್ಕದೊಂದು ಕೈಚೀಲ, ಒಂದು ಟ್ರಂಕು, ಒಂದು ಹಳೆಯ ಸೈಕಲಿನೊಂದಿಗೆ ಆ ಊರಿಗೆ ಬಂದಿಳಿದಿದ್ದ ಸುಬ್ಬರಾಯ, ಇಂದು ಒಂದು ಚಿಕ್ಕಮನೆ, ನಾಲ್ಕೆಕರೆ ಹೊಲ, ಮೊಪೆಡ್ ಒಂದನ್ನು ಸಂಪಾದಿಸಿಕೊಂಡಿದ್ದ. ತನ್ನಿಂದಾಗದ ಬಡವರ ಕೇಸುಗಳನ್ನು ಅಮಲಾಪುರದ ಡಾಕ್ಟರ್ ರಾಜು ಅವರ ಬಳಿಗೋ, ಕಾಕಿನಾಡದ ಜಿಲ್ಲಾ ಸರಕಾರಿ ಆಸ್ಪತ್ರೆಗೋ ಕರೆದುಕೊಂಡು ಹೋಗುತ್ತಿದ್ದ. ಹಣವಂತ ಮಹಾರಾಜರನ್ನು ಕಾಕಿನಾಡದ ಅಪೋಲೊಗೋ, ಡಾಕ್ಟರ್ ಶರ್ಮರ ಬಳಿಗೋ ಕಳಿಸಿಕೊಡುತ್ತಿದ್ದ. ಹೀಗೆ ತನ್ನಿಂದಾದ ಸಹಾಯವನ್ನು ಊರಿನವರಿಗೆ ಮಾಡುತ್ತಾ ಊರಿಗೆ ಬೇಕಾದ ಒಳ್ಳೆಯ ವ್ಯಕ್ತಿಯಾಗಿ ಗೌರವವನ್ನು ಸಂಪಾದಿಸಿಕೊಂಡಿದ್ದ ಸುಬ್ಬರಾಯ.

ಸುಬ್ಬರಾಯ ಬಂದುದನ್ನು ಗಮನಿಸಿದ ಸತ್ಯವತಿ ಕುಡಿಯಲು ನೀರು ತರಲು ಒಳಗಡೆ ಹೋದಳು.

ದೂರದಲ್ಲಿ ಸೂರ್ಯ ಗೋದಾವರಿಯ ಹಿಂದೆ ಸಾವಕಾಶವಾಗಿ ಮರೆಯಾಗುತ್ತಿದ್ದ.

ಹೊರಗಡೆ ಗೋದಾವರಿಯ ಮೇಲಿನ ತಂಗಾಳಿ ಬೀಸುತ್ತಿತ್ತು.

ಬಂದವನೇ ವೀರಯ್ಯನಿಗೆ ಇಂಜೆಕ್ಷನ್ ಮಾಡಿದ ಸುಬ್ಬರಾಯ, ಹೊರಬಂದು ಬಾಗಿಲಬಳಿ ಹಾಕಿದ್ದ ಹಗ್ಗದ ಮಂಚದ ಮೇಲೆ ಕುಳಿತ.

"ಏನು ಸತ್ಯವತಿ? ಏನೋ ಮಾತಾಡ್ಬೇಕು ಅಂತಿದ್ಯಲ್ಲಾ?" ನೀರಿನ ಲೋಟ ಹಿಡಿದು ಬಂದ ಸತ್ಯವತಿಯನ್ನು ಕೇಳಿದ.

"ಸುಬ್ಬರಾಯಣ್ಣಾ, ಡಾಕ್ಟರ್ ರಾಮರಾಜು ಅವರು ನಿನ್ನ ಹತ್ರ ಏನೋ ಹೇಳ್ತಿದ್ರಲ್ಲ... ಅದೇ... ಯಾರಿಗೋ ಕಿಡ್ನಿ ಬೇಕು... ಅದಕ್ಕೆ ನಾಲ್ಕೈದು ಲಕ್ಷ ಕೊಡ್ತಾರೆ ಅಂತ... ವಿಷಯ ಏನು ತಿಳ್ಕೊಳ್ಳೋಣ ಅಂತ... ಬರೇಳ್ದೆ..."

"ಆ ವಿಷಯಾನಾ... ಮನುಷ್ಯನಿಗೆ ಎರಡು ಕಿಡ್ನೀಗಳು ಇರುತ್ತೆ ಸತ್ಯವತೀ... ಎರಡೂ ಹಾಳಾಗೋವರ್ಗೂ ನಮ್ಗೆ ಗೊತ್ತಾಗೋದೇ ಇಲ್ಲ. ಹಾಗೆ ಹಾಳಾದವರಿಗೆ ಯಾರಾದ್ರೂ ಒಂದು ಕಿಡ್ನಿ ಕೊಡಬಹುದು. ಒಂದು ಕೊಟ್ಟರೂ ಇನ್ನೊಂದು ಕಿಡ್ನಿಯಿಂದ್ಲೇ ಸುಖವಾಗಿ ಬದುಕಿಬಿಡಬಹುದು. ಎಲ್ಲಾ ಭಗವಂತನ ಮಾಯೆ. ಎಲ್ಲರ ಕಿಡ್ನಿ ಎಲ್ಲರಿಗೂ ಸೆಟ್ ಆಗೊಲ್ಲ. ಅದಕ್ಕೆ ಕೆಲವು ಪರೀಕ್ಷೆಗಳು ಆಗ್ಬೇಕು. ರಾಜು ಅವರು ಹೇಳಿದ್ಮೇಲೆ ಒಬ್ಬ ಹೆಂಗಸನ್ನು ಕೇಳಿದೀನಿ. ಆ ಹೆಂಗ್ಸು ಎಂಟು ಲಕ್ಷ ಕೇಳ್ತಿದಾಳೆ. ಬೇಡ ಅಂತ ಅವ್ರಿಗೆ ಹೇಳಿಬಿಟ್ಟೆ..." ಎಂದ ಸುಬ್ಬರಾಯ.

"ನಾನು ಕೊಡ್ಬಹುದಾ?..." ತಲೆ ತಗ್ಗಿಸಿಕೊಂಡೇ ಕೇಳಿದಳು ಸತ್ಯವತಿ.

"ನೀನಾ?..'' ಬೆಚ್ಚಿದ ಸುಬ್ಬರಾಯ ಕೇಳಿದ.

"ನಿಂಗೇನು ಹೋಗೋ ಕಾಲ ಬಂತೇ?... ಇಂಥಾ ಹಾಳು ಆಲೋಚನೆ ನಿನ್ನ ತಲೆಗೆ ಹೇಗೆ ಬಂತು?"